ಎ) ಹೌದು.

ಬಿ) ಒಟ್ಟು 43,305.58 ಹೆಕ್ಟೇರ್ ಅರಣ್ಯ ಭೂಮಿ ಅತಿಕ್ರಮಣವಾಗಿದೆ ಎಂದು ಅಂದಾಜು ಮಾಡಲಾಗಿದೆ.

ಸಿ) ದಿನಾಂಕ 27–4–1978ರ ಹಿಂದೆ ಅತಿಕ್ರಮಣ ಮಾಡಿದ್ದಲ್ಲಿ ಅಂತಹ ಅತಿಕ್ರಮಣದ ಅರಣ್ಯ ಭೂಮಿಯನ್ನು ಅರಣ್ಯ ಸಂರಕ್ಷಣೆ ಕಾಯಿದೆ 1980ರ ಅನ್ವಯ ಭಾರತ ಸರ್ಕಾರದ ಅನುಮತಿಯನ್ನು ಪಡೆದು ಸಕ್ರಮಗೊಳಿಸಲು ಉದ್ದೇಶಿಸಲಾಗಿದೆ.

ಡಿ) ಹೌದು.

ಇ) ಇಲ್ಲಾ.

ಏಡ್ಸ್ ರೋಗದ ಸೋಂಕು ತಡೆಗಟ್ಟಲು ರಕ್ತ ಪರೀಕ್ಷೆ

283 (1017) ಜಿ.ಪುಟ್ಟಸ್ವಾಮಿ ಗೌಡ (ಹೊಳೇ ನರಸಿಪುರ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಏಡ್ಸ್ ರೋಗದ ಸೋಂಕು ಹರಡುವುದನ್ನು ತಡೆಗಟ್ಟಲು ರಕ್ತಪರೀಕ್ಷೆ ಮಾಡುವ ವ್ಯವಸ್ಥೆಯನ್ನು ಪರಿಶೋಧಿಸುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಸಿಕೊಂಡಿದೆಯೇ ?

ಬಿ) ಇಲ್ಲದಿದ್ದರೆ ಈ ತರಹದ ಕಾರ್ಯಕ್ರಮವನ್ನು ಹಾಕಿಕೊಳ್ಳಲು ಸರ್ಕಾರಿ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಎ) ರಕ್ತ ಪರೀಕ್ಷೆಯ ವ್ಯವಸ್ಥೆಯನ್ನು ಪರಿಶೋಧಿಸುವ ವಿಷಯವು ಒಂದು ಹೊಸ ಸಂಗತಿಯಾಗಿದ್ದು ಇದನ್ನು ಸರ್ಕಾರ ಪರಿಶೀಲಿಸುತ್ತಿದೆ. ಪ್ರಸ್ತುತ ಆ ರೀತಿಯ ಪರಿಶೋಧನೆ ಪ್ರಾರಂಭಿಸಿಲ್ಲ.

ಬಿ) ಹೌದು. ಸರ್ಕಾರ ಈ ತರಹದ ಕಾರ್ಯಕ್ರಮ ಹಾಕಿಕೊಳ್ಳಲು ಬಯಸುತ್ತದೆ.

ಭದ್ರಾವತಿ ತಾಲ್ಲೂಕಿನಲ್ಲಿ ಬಿದ್ದ ಬಾರಿ ಮಳೆಯಿಂದಾಗಿ ಮೀನುಗಾರರ ಬಲೆಗಳು ಕೊಚ್ಚಿ ಹೋಗಿ ಪರಿಹಾರಕ್ಕೆ ಒತ್ತಾಯ

285 (1026) ಶ್ರೀ ಕರಿಯಣ್ಣ (ಹೊಳೇಹೊನ್ನೂರು):-

ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ದಿನಾಂಕ 16,17ರ ನವೆಂಬರ್, 1992ರಂದು ಬಿದ್ದ ಬಾರಿ ಮಳೆಯಿಂದ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ 15 ಪ್ರಮುಖವಾದ ಕೆರೆಗಳು ಒಡೆದು ಮೀನು ಸಾಕಾಣಿದಾರರ ಮೀನುಗಳು ಹಾಗೂ ನದಿಯ ಬುಡದಲ್ಲಿದ್ದ ಮೀನುಗಾರರ ಬಲೆಗಳು ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಿ) ಹಾಗಿದ್ದಲ್ಲಿ, ಈ ಬಡ ಮೀನುಗಾರರಿಗೆ ಸರ್ಕಾರವು ಪರಿಹಾರವನ್ನು ನೀಡಿದೆಯೇ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳು ರಾಜ್ಯ ಸಚಿವರು):–

ಅ) ಹೌದು.

ಆ) ಈ ವಿಷಯವು ಪರಿಗಣನೆಯಲ್ಲಿದೆ.

ಖಾಸಗೀ ಪ್ರೌಢಶಾಲೆಗಳಲ್ಲಿರುವ ನೌಕರರ ಸಂಖ್ಯೆ

286 (1027) ಕರಿಯಣ್ಣ (ಹೊಳೇ ಹೊನ್ನೂರು):-

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಖಾಸಗಿ ಪ್ರೌಢಶಾಲೆಗಳೆಷ್ಟು, ಅವುಗಳಲ್ಲಿರುವ ನೌಕರರೆಷ್ಟು;

ಆ) ಅವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರೆಷ್ಟು;

ಇ) ಸರ್ಕಾರದ ಮೀಸಲಾತಿಯ ನಿಯಮಗಳನ್ನು ಪಾಲಿಸದ ಖಾಸಗಿ ಪ್ರೌಢಶಾಲೆಗಳಕ ಮೇಲೆ ಸರ್ಕಾರವು ಕೈಗೊಂಡ ಕ್ರಮವೇನು ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ) ಅನುದಾನಸಹಿತ ಶಾಲೆಗಳು	2097
ಅನುದಾನರಹಿತ ಶಾಲೆಗಳು	930
1992–93ನೇ ಸಾಲಿನಲ್ಲಿ ಇದುವರೆಗೂ ಶಾಶ್ವತ ಅನುದಾನರಹಿತವಾಗಿ ಮಂಜೂರಾಗಿರುವ ಶಾಲೆಗಳ ಸಂಖ್ಯೆ	818
ಒಟ್ಟು	3845

ಒಟ್ಟು 26,066 ಸಿಬ್ಬಂದಿ ವರ್ಗದವರಿದ್ದಾರೆ.

ಆ)	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ
ಅನುದಾನಸಹಿತ ಶಾಲೆಗಳಲ್ಲಿ		854 164
ಅನುದಾನರಹಿತ ಶಾಲೆಗಳಲ್ಲಿ	329	44
	1183	208

ಇ) ಅನುದಾನ ಸಂಹಿತೆಯ ನಿಯಮಗಳ ಪ್ರಕಾರ ಪ್ರತಿ ಪ್ರಕರಣದ ಅರ್ಹತೆಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ರಾಜ್ಯದಲ್ಲಿ ಸಾಕ್ಷರತೆಯ ಯೋಜನೆಯ ಪ್ರಗತಿ

287 (1053) ಶ್ರೀ ಎಚ್.ಎಂ. ರೇವಣ್ಣ (ಮಾಗಡಿ):-

ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಾಕ್ಷರತೆ ಯೋಜನೆ ಯಾವ ಹಂತದಲ್ಲಿದೆ ?

ಆ) ಸಾಕ್ಷರತೆ ಯೋಜನೆಯಲ್ಲಿ ಸಂಪೂರ್ಣ ಸಾಕ್ಷರತೆಯೆಂದು ಘೋಷಿಸಲಾದ ಜಿಲ್ಲೆಗಳೆಷ್ಟು ?

ಇ) ರಾಜ್ಯವನ್ನು ಸಂಪೂರ್ಣ ಸಾಕ್ಷರತೆಯನ್ನಾಗಿ ಯಾವಾಗ ಘೋಷಿಸಲಾಗುವುದು ?